**ಆ ದಿನ ಬಾಗಿಲಲ್ಲಿ ಕೂತಿದ್ದ ರಾಯರು ಆಡಿದ ಮಾತುಗಳನ್ನು ಕೇಳಿ, ದಿನೇಶನ ಕಣ್ಣುಗಳು ನೀರು ತುಂಬಿಕೊಂಡವು.**



‘ಮುದುಕ! ದರಿದ್ರ ಮುದುಕ! ದಿನಾ ನನ್ನ ಮಾನ ಮರ್ಯಾದಿ ತೆಗೀತಾನೆ’ ವಾಕಿಂಗಿನಿಂದ ಬಂದ ದಿನೇಶ ಸೇಂಕುತ್ತ ಹೇಳಿದ. ‘ಇಷ್ಟಕ್ಕೂ ಎಂತ ಆಯ್ತು ಅಂತ ಹಾರಾಡ್ತೀರಿ? ಶ್ರೀನಿವಾಸ್ ರಾಯರು ಎಂತ ಮಾಡಿದ್ರು?’ ಹೆಂಡತಿ ಸ್ನೇಹಾ ಕೇಳಿದಳು. ‘ಎಂತ ಆಯ್ತಾ? ಬೆಳಗ್ಗೆ ನಾನು ಎಷ್ಟು ಹೊತ್ತಿಗೆ ವಾಕಿಂಗಿಗೆ ಹೊರಡ್ತೇನೆ ಅಂತ ಕಾಯ್ತಾ ಇದ್ದ. ನನ್ನನ್ನು ಕಂಡವನೇ ಹಾಯ್ ಯಂಗ್ ಮ್ಯಾನ್ ಕೆರೆಯ ಸುತ್ತ ವಾಕಿಂಗ್ ಹೋಗುವ ಬಾ ಅಂದ. ಬೀಸ ಬೀಸ ನಡೀಲಿಕ್ಕೆ ಸುರುಮಾಡಿದ. ನಂಗೆ ದಮ್ಮು ಬರ್ಲಿಕ್ಕೆ ಸುರುವಾಯಿತು. ಸ್ವಲ್ಪ ನಿಂತೆ. ಕೆರೆಯ ಹತ್ತಿರ ಅವನ ಫ್ರೆಂಡ್ಸ್ ಸಿಕ್ಕಿದ್ರು. ನಂಗಿಂತ ಹದಿನೈದು ಇಪ್ಪತ್ತು ವರ್ಷ ಚಿಕ್ಕವನು. ದಿನೇಶ ಅಂತ ಇವನ ಹೆಸ್ರು. ಪಟ್ಟಣದ ಕಾಲೇಜಲ್ಲಿ ಫಿಸಿಕಲ್ ಡೈರೆಕ್ಟರ್. ನೀವಾಗಿ ಆ ಹುದ್ದೆಯಲ್ಲಿ ಇರುವವರು ಹೇಗಿರಬೇಕು? ಬೊಜ್ಜು ಗಿಜ್ಜು ಎಂಥದೂ ಇರಬಾರದು. ಈ ಇವನ ಹೊಟ್ಟೆ ನೋಡಿ. ಎಂಟು ತಿಂಗಳ ಗರ್ಭಿಣಿಯ ಹಾಗೆ ಉಂಟು ಅಂತ ಮಕ್ಕಾರು ಮಾಡಿದ’ ಅಂತ ಹೇಳಿದ ದಿನೇಶ. ಅದನ್ನು ಕೇಳಿದ ಅವಳು ಪಕಪಕನೆ ನಕ್ಕಳು. ದಿನೇಶನಿಗೆ ಮತ್ತೆ ಕಿರಿಕಿರಿ ಆಯಿತು. ‘ನೀನು ಸಾ ಸೇರಿದ್ದೀ ಅಲ್ವಾ ಅವನ ಒಟ್ಟಿಗೆ? ನನ್ನ ಹೊಟ್ಟೆ ಕರಗಿಸ್ಬೇಕು ಅಂತ ನೀನು ಫಿಟ್ಟಿಂಗ್ ಇಟ್ಟೇ ಹೀಗಾದದ್ದು’ ಮತ್ತಷ್ಟು ಸಿಟ್ಟಿನಿಂದ ಕೂಗಾಡಿದ. ‘ಆಮೇಲೆ? ಆಮೇಲೆ ಎಂಥದಾಯ್ತು?’ ಸ್ನೇಹಾ ನಗುತ್ತ ಕೇಳಿದಳು.

‘ಆಮೇಲೆ ಎಂಥದಾಗುದಾ ಕರ್ಮ? ಡಿಯರ್ ಯಂಗ್ ಮ್ಯಾನ್ ಕೆರೆಯ ಸುತ್ತ ನಾಕು ರೌಂಡ್ ಓಡುವಾ ಅಂತ ಹೇಳಿದ. ನಾನು ಒಂದು ಕೈ ನೋಡುವಾ ಅಂತ ಹೂಂ ಅಂತ ಹೇಳಿದೆ. ನಂಗೆ ಒಂದು ರೌಂಡ್ ಓಡುವಾಗಲೇ ಸಾಕು ಸಾಕಾಗಿ ಹೋಯಿತು. ಅದಕ್ಕೆ ಸಾ ಮಕ್ಕಾರ್ ಮಾಡಿದ ಆ ಮುದುಕ. ಯೆಂತ ಹೇಳಿದ ಗೊತ್ತುಂಟಾ? ನಾಕು ರೌಂಡ್ ಓಡ್ಲಿಕ್ಕೆ ಆಗದೇ ಇದ್ರೆ ನೀನು ಯೆಂತ ಪೀಡಿಯಾ? ಅನ್ ಫಿಟ್ ಆ ಪೋಸ್ಟಿಗೆ ಅಂದ. ಸೀದ ಹಿಂದಿರುಗಿ ನೋಡದೇ ಬಂದು ಬಿಟ್ಟೆ. ಅವ ಹೇ ಯಂಗ್ ಮ್ಯಾನ್ ಅಂತ ಕರೀತಾನೇ ಇದ್ದ. ನಾನು ಕೇಳಿದ್ರೂ ಕೇಳದವರ ಹಾಗೆ ಬಂದೆ’ ಅಂತ ಹೇಳಿದ.